

ವಾರಕ್ಕೊಮ್ಮೆಯಾದರೂ ಮಲ್ಲೂರಿನ ಬಗ್ಗೆ ಏನಾದರೊಂದು ಸುದ್ದಿ ಬರದಿದ್ದರೆ ಅದು ಪತ್ರಿಕೆಯೆ ಅಲ್ಲ! ಊರಿಗೆ ಸಂಬಂಧಪಟ್ಟ ಇಂತಹ ಸುದ್ದಿಗಳನ್ನು ಬಸ್ಸಿನಲ್ಲಿ ಜೋರು ಬಾಯಿ ಮಾಡಿ ಕೆಲವರು ಓದುತ್ತಿದ್ದರು. ಆಗ ಬಸ್ಸು ಗಪ್ಪಗಾರು ಆಗುತ್ತಿತ್ತು. ಊರುಕೇರಿ ಕುರಿತು ಈ ಮಂದಿಗೆ ಎಷ್ಟೆಲ್ಲ ಗೌರವವೆಂದು ಬಸ್ಸಿನ ಚಾಲಕ, ನಿರ್ವಾಹಕ ಮೂಕವಿಸ್ಮಿತರಾಗಿ ಊರ ಸುದ್ದಿಯನ್ನು ಓದಿ ಮುಗಿಸುವವರೆಗೆ ಬಸ್ಸನ್ನು ಸೈಡು ನಿಲ್ಲಿಸುತ್ತಿದ್ದರು. ಸುದ್ದಿ ಓದಲು ನಿಲ್ಲಿಸುತ್ತಿದ್ದರೊ ಇಲ್ಲವೆ ಟಿಕೆಟ್ ಕೊಡಲು ನಿಲ್ಲಿಸುತ್ತಿದ್ದರೊ? ಒಟ್ಟಿನಲ್ಲಿ ಬಸ್ಸು ಹದಿನೈದು ಇಪ್ಪತ್ತು ನಿಮಿಷ ನಿಲ್ಲುತ್ತಿತ್ತು. ಹೆಚ್ಚಾಗಿ ಈ ರೂಟ್ ಬಸ್ಸುಗಳಿಗೆ ಸುಭಾಸ ಕಂಡಕ್ಟರ್ ಇರುತ್ತಿದ್ದ. ಡ್ರೈವರ್ ಅನಿಲ ಮತ್ತು ಕಂಡಕ್ಟರ್ ಸುಭಾಸ ಇಬ್ಬರೂ ಇಲ್ಲಿಯೆ ಹತ್ತಿರದ ಹೊಸೂರಿನವರು. ಅವರಿಗೆ ಊರಿನ ಎಲ್ಲರೂ ಗೊತ್ತು.

ಬಸ್ಸು ನಿಲ್ಲಿಸಿದಾಗ ಕೆಲವರು ಹೇಳಕೇಳದೆ ಕೆಳಗಿಳಿದು ಒತ್ತಡದ ಕೆಲಸಕಾರ್ಯ ಮುಗಿಸಿ ಹತ್ತುವರು. ರಾತ್ರಿ ವಸ್ತಿ ಬಸ್ಸಿಗೆ ಇಂತಹವರ ಕಾಟ ಬಹಳ. ಕೆಲವರಂತೂ ಬಸ್ಸು ಹತ್ತಬೇಕಾದರೆ ಕುಡಿದೇ ಹತ್ತುವರು. ನಡುವೆ ಒಂದಕ್ಕೆ ಅಂತ ಇಳಿದವರನ್ನು ತಿರುಗಿ ಬಸ್ಸು ಹತ್ತಿಸಬೇಕಾದರೆ ಸಾಕುಸಾಕಾಗುತ್ತಿತ್ತು. ಒಮ್ಮೊಮ್ಮೆ ನಡುವೆಯೆ ಇಳಿದು ಯಾವುದೊ ಒಂದೆರಡು ಮನೆಗಳನ್ನು ತೋರಿಸಿ 'ಏಯ್ ಡ್ರೈವರ್ ಇದೇ ಮಲ್ಲೂರು. ಮತ್ತ್ಯಾಕ ಮುಂದೆ ಹೋಗಾಕ ಹತ್ತಿ? ಬಸ್ಸು ಮುಂದೆ ಹೋದರೆ ದೇವರ ಮೇಲೆ ಆಣೆ.' ಅವರು ಬಸ್ಸಿನ ಮುಂದುಗಡೆ ಬಂದು ರಸ್ತೆಯಲ್ಲಿ ಮಲಗುವರು! ಊರಿಗೆ ಸಂಬಂಧಿಸಿದ ಸುದ್ದಿ ಓದುವಾಗಲಂತೂ ಪ್ರಯಾಣಿಕರು ಮೈಯನ್ನು ಕಿವಿಯಾಗಿಸಿಕೊಳ್ಳುವರು. ಪ್ರಪಂಚದ ತುಂಬ ಹೋಗುವ ಈ ಪತ್ರಿಕೆಯಲ್ಲಿ ತಮ್ಮೂರಿನ ಹೆಸರು ಬಂದಿದೆಯೆಂದು ಪುಳಕಿತಗೊಂಡು, ಈಗಾಗಲೆ ತುಂಬಿ ತುಳುಕುವ ಬಸ್ಸಿನಲ್ಲಿ ಮತ್ತಷ್ಟು ಮುದುಡಿ ಕುಳಿತು, ಬಸ್ಸಿಗೆ ಕಾಯುತ್ತಿರುವ ಇನ್ನಷ್ಟು ಮಂದಿಯನ್ನು ಹತ್ತಿಸಿಕೊಳ್ಳುವರು. ಅಬ್ಬಬ್ಬಾ ಎಂದರೆ ಅರವತ್ತು ಅರವತ್ತೈದು ಜನರಿರಬೇಕಾದ ಬಸ್ಸಿನಲ್ಲಿ ಅದರ ದುಪ್ಪಟ್ಟು ಮಂದಿ ಪ್ರಯಾಣಿಸುವರು. ಎಷ್ಟು ಜನ ಹತ್ತಿದರೂ ತುಂಬಿಸಿಕೊಳ್ಳುವ ಬಸ್ಸಿಗೆ ಹಿಗ್ಗುವ ಗುಣವಿತ್ತೊ ಏನೋ? ಜನ ಕಡಿಮೆಯಾದ ಕೂಡಲೆ ಅದು ಕುಗ್ಗುತ್ತಿತ್ತು! ಎಲ್ಲರನ್ನೂ ಒಳಗೊಳ್ಳುವ ಶ್ರೇಯವನ್ನು ಯಾರಿಗೆ ಕೊಡಬೇಕು? ಬಸ್ಸಿಗೆ ಕೊಡಬೇಕೊ, ಸುಗಮವಾಗಿ ಸಾಗಿಸಿಕೊಂಡು ಹೋಗುತ್ತಿರುವ ಚಾಲಕನಿಗೆ ಕೊಡಬೇಕೊ, ಇಲ್ಲವೆ ಟಿಕೆಟ್ ತೆಗೆದುಕೊಳ್ಳದೆ ಅಲ್ಲಿ, ಇಲ್ಲಿ, ಮೂಲೆಯಲ್ಲಿ, ಸೀಟಿನ ಕೆಳಗಡೆ ಅಡಗಿ ಕುಳಿತಿರುವ ಜನರನ್ನು ಹುಡುಕಿ ಟಿಕೆಟ್ ಹರಿಯುವ ಕಂಡಕ್ಟರ್ನಿಗೆ ಕೊಡಬೇಕೋ?

ಊರಿನ ಸುದ್ದಿ ಓದುವಾಗ ಬಸ್ಸು ಪುಟ್ಟಪೂರಾ ನಿಶಬ್ದವಾಗಿರುವುದರಿಂದ ಅದು ನೆಲದ ಮೇಲೆ ಓಡುತ್ತಿದೆಯೋ, ಇಲ್ಲಾ ಗಗನದಲ್ಲಿ ಹಾರುತ್ತಿದೆಯೋ ಎಂಬ ಅನುಮಾನ ಉಂಟಾಗುತ್ತಿತ್ತು. ಊರಿನ ಬಗ್ಗೆ ಇಷ್ಟು ಹೆಮ್ಮೆ ಹೊಂದಿರುವ ಜನಸಮೂಹವನ್ನು ಚಾಲಕನಿರ್ವಾಹಕರು ಅಭಿನಂದಿಸಿ ತಾವೂ ಊರವರೆ ಎಂದುಕೊಳ್ಳುವರು. ಬಸ್ಸು ಎಷ್ಟೇ ತುಂಬಿದ್ದರೂ ಡ್ರೈವರ್ ನಿಲ್ಲಿಸಿಯೇ ನಿಲ್ಲಿಸುವುದರಿಂದ ಅದನ್ನು ಹತ್ತು ಹೆಜ್ಜೆಗೊಮ್ಮೆ ನಿಲ್ಲುತ್ತಿತ್ತು. ಹೀಗಾಗಿ ಅರ್ಧತಾಸಿನ ದಾರಿ ಕ್ರಮಿಸಲು ಬಸ್ಸಿಗೆ ಎರಡು ತಾಸು ಬೇಕಿತ್ತು. ಅಷ್ಟು ತಡವಾದರೂ ಯಾರೊಬ್ಬರೂ ಮುನಿಸಿಕೊಳ್ಳುತ್ತಿರಲಿಲ್ಲ. ಒಟ್ಟಿನಲ್ಲಿ ಊರು ತಲುಪುತ್ತದೆಯಲ್ಲ, ಅದೇ ಸಾಕೆಂದು ಬಸ್ಸಿನಲ್ಲಿ ಒಂದು ನಿದ್ದೆ ತೆಗೆಯುತ್ತಿದ್ದರು. ಊರಿನ ಹೆಸರನ್ನು ಅಕ್ಷರಗಳಲ್ಲಿ ಕಂಡು, ಪತ್ರಿಕೆಯನ್ನು ಮತ್ತೆ ಮತ್ತೆ ಮುಟ್ಟುವವರು ಇದ್ದರು. ಓದು ಬಾರದಿದ್ದವರು ಆ ಪತ್ರಿಕೆಯಿಂದ ಗಾಳಿ ಹಾಕಿಕೊಳ್ಳುತ್ತಿದ್ದರು.

ತಮ್ಮ ಊರಿನ ಹೆಸರು ಈಗಾಗಲೆ ಎಷ್ಟು ಪೇಪರುಗಳಲ್ಲಿ, ಎಷ್ಟು ಸಾರಿ ಬಂದಿದೆಯೆಂದು ಲೆಕ್ಕ ಇಟ್ಟ ಕೆಲವು ಹಿರಿಯರು ಮಲ್ಲೂರಿನಲ್ಲಿದ್ದರು. ಅವರಲ್ಲಿ ಪ್ರಮುಖರಾದವರೆಂದರೆ ಹಿಂದೆ ಬ್ರಿಟಿಷರ ಸ್ಕೂಲಿನಲ್ಲಿ ಐದನೆಯ ತರಗತಿತನಕ ಓದಿದ್ದೇನೆಂಬ ಹೆಮ್ಮೆಯ ಮುಂದಿನಮನಿ ಸಣ್ಣವೀರಪ್ಪ ಮತ್ತು ವಯಸ್ಕರ ಶಾಲೆಯ ಮೂಲಕ ಅಕ್ಷರ ಕಲಿತಿದ್ದ ಹಂಚಿನಮನಿ ಮಾದೇವಪ್ಪ. ಸಣ್ಣವೀರಪ್ಪನವರಂತೂ ಒಂದು ಹಳೆಯ ನೋಟ್‌ಬುಕ್‌ನಲ್ಲಿ ಇಂಕ್‌ಪೆನ್ನಿನಿಂದ ಸಣ್ಣ ಸಣ್ಣ ಅಕ್ಷರಗಳಲ್ಲಿ ಒಂದು ಪುಟಕ್ಕೆ ಇಷ್ಟು ಸಾಲು ಎಂದು ಲೆಕ್ಕ ಹಾಕಿ ಬರೆದು ಇಡುವರು. ಅದನ್ನು ಬರೆಯುವುದಕ್ಕೆಂದು ಕೆಂಪು, ಹಸಿರು ಪೆನ್ನುಗಳನ್ನು ಹೊಂಗಲದಿಂದ ತಂದಿದ್ದರು. ಮುಂಜಾನೆಯಿಂದ ಸಂಜೆಯ ತನಕ ಅವರಿಗೆ ಅದೇ ಕೆಲಸ. ನೀಟಾಗಿ ಬರೆಯುವುದರಲ್ಲಿ ಅವರು ಒಮ್ಮೊಮ್ಮೆ ಊಟ ನಿದ್ರೆ ಮರೆಯುತ್ತಿದ್ದ ಹಾಗಿತ್ತು. ವೃದ್ಧಾಪ್ಯದಲ್ಲಿ ಇಂತಹ ಹವ್ಯಾಸದ ಅಗತ್ಯವೇನೆಂದು ಅವರ ಮನೆಯಲ್ಲಿ ಬೈಗುಳಗಳ ಸುರಿಮಳೆಯೇ ಸುರಿಮಳೆ.

'ಈ ಮುದುಕನಿಗೆ ಬುದ್ಧಿಯೇ ಇಲ್ಲ. ಹೊತ್ತು ಹೊಂಟ್ರ ಸಾಕು, ಹೀಂಗ ಕೆಲಸ ಬಗಸಿ ಬಿಟ್ಟು ಊರ ಹೆಸರು ಬರಕೋಂತ ಕುಂದ್ರತಾನು, ನಡುನಡುವೆ ಮಾಯಕ್ಕನ ಹೆಸರು ಸೈತ ಬರಿತಾನ. ಆಕೆ ಇದುವರೆಗೆ ಎಷ್ಟು ಭಾಷಣ ಮಾಡ್ಯಾಳ ಅನ್ನೋದನ್ನೂ ಬರದ ಇಟ್ಟಾನ ಈ ಮುತ್ಯಾ.' ನಾಳೆನಾಡಿದ್ದರಲ್ಲಿ ಸಾಯುವಂತಿರುವ ಮುದುಕ ಮಕ್ಕಳಿಗೆ ಹೊಲಮನೆ ಆಸ್ತಿ ಬಟವಾಡೆ ಮಾಡದೆ ಇಂತಹ ಅನುಪಯುಕ್ತ ಕೆಲಸ ಮಾಡುತ್ತಾನೆಂದು ಹಿರಿಯ ಮಗ ಮತ್ತು ಸೊಸೆ ಅವನನ್ನು ತಾತ್ಸಾರ ಮಾಡುವುದು ವಿಶಿಷ್ಟವಾಗಿತ್ತು. ಆ ನೋಟ್‌ಬುಕ್‌ನ್ನು ಮುಚ್ಚಿಡುವುದು, ಅದರ ಮೇಲೆ ನೀರು ಚೆಲ್ಲುವರು, ಉದ್ದ ಗೀರಿನಿಂದ ಕಾಟು ಹಾಕುವುದು ಮುಂತಾದ ಸಾಹಸಗಳನ್ನು ಮೊಮ್ಮಕ್ಕಳ ಕೈಯಿಂದ ಮಾಡಿಸುತ್ತಿದ್ದರು. ಕಿರಿ ಸೊಸೆಯ ಪ್ರತಿಭಟನೆ ಅದಕ್ಕಿಂತ ಭಿನ್ನವಾಗಿರುತ್ತಿತ್ತು.

'ಈ ಮುದುಕ ಸತ್ತಮ್ಯಾಲ ಅವನನ್ನ ಹುಗಿಯೋ